ಹೆಚ್ಚಿದೆ. ವಲಸೆ ಹಕ್ಕಿಗಳೂ ಕೂಡ ಇಲ್ಲಿ ಬಂದಿರಲು ಆಸೆ ಪಡುತ್ತವೆ. ಕಾರಣ ಇಲ್ಲಿನ ತೇವಾಂಶವುಳ್ಳ ತಗ್ಗು-ಭೂಮಿಯ ಅರಣ್ಯ. ನನ್ನ ಪ್ರಕಾರ ಅದೊಂದು ಸ್ವರ್ಗದ ಪಡಸಾಲೆ. ಭಾರತೀಯ ಪಿಟ್ಟಾ ಹಕ್ಕಿ ಚಳಿಗಾಲದಲ್ಲಿ ಇಲ್ಲಿನ ಅಭಯಾರಣ್ಯಕ್ಕೆ ಭೇಟಿ ಕೊಡುತ್ತದೆ. ಭಾರತದ ಬೇರೆ ವಲಸೆ ಭಾಗದಲ್ಲಿ ಪಿಟ್ಟಾ ಹಕ್ಕಿ ಮೂರು ತಿಂಗಳು ಠಿಕಾಣಿ ಮಾಡಿದರೆ ಇಲ್ಲಿ ಬರೋಬ್ಬರಿ ಆರು ತಿಂಗಳ ಕಾಲ ಉಳಿಯುತ್ತದೆ. ನವರಂಗಿ ಎಂಬ ಹೆಸರಿನ ಈ ಹಕ್ಕಿಗೆ ಈ ನೆಲ ಅಷ್ಟು ಹಿತವೆನಿಸಿಬಿಟ್ಟಿದೆ.

ನಮಗೆ ಸಿಕ್ಕ ಸುಧಾ ಅವರ ಮಗ ಗಿರೀಶ್ ಮೈಸೂರಿನಲ್ಲಿ ಓದಿದವನು. ಹೀಗಾಗಿ ಅವನಿಗೆ ಕನ್ನಡ ಚೆನ್ನಾಗಿ ಬರುತ್ತಿತ್ತು. ಅವನ ಸಾಕಷ್ಟು ಗೆಳೆಯರು ಕರ್ನಾಟಕದಿಂದ ಬಂದು ಇಲ್ಲಿದ್ದು ಹೋಗುತ್ತಾರಂತೆ. ಈತನೂ ತಾಯಿಯಿಂದ ಪಕ್ಷಿಗಳ ವಿದ್ಯೆ ಕಲಿತು ಪ್ರವೀಣನಾಗಿದ್ದಾನೆ. ಮಾಹಿತಿ ಓದಿಕೊಂಡು ಭರಪೂರನಾಗಿದ್ದಾನೆ. ನೀವು ಬರುವ ಎರಡು ದಿನ ಮೊದಲು ನನ್ನೊಟ್ಟಿಗೆ ನನ್ನ ಪುಂಡಪೋಕರಿ ಗೆಳೆಯರ ಗುಂಪು ಬಂದಿತ್ತು ಎಂದು ನಗುನಗುತ್ತಾ ಹೇಳಿದನು. ಮೈಸೂರಿನ ಗೆಳೆಯರ ಉದಾರ ಸ್ನೇಹ, ಅಲ್ಲಿನ ಊಟ ತಿಂಡಿಗಳ ಬಗ್ಗೆ ಭಾವುಕವಾಗಿ ಮಾತಾಡಿದನು. ಇವನ ಹೊರತು ಮನೆಯ ಉಳಿದ ಯಾರಿಗೂ ಮಲಯಾಳಂ, ಇಂಗ್ಲಿಷು ಬಿಟ್ಟರೆ ಬೇರೆ ಭಾಷೆ ಬರುತ್ತಿರಲಿಲ್ಲ. ಗಿರೀಶ್ ಪತ್ನಿ ಕೂಡ ಈ ಮನೆ ಸೇರಿ ಆರೇಳು ವರ್ಷವಾಗಿದೆ. ಇವರಿಗೆ ಪುಟಾಣಿ ಮಗಳಿದ್ದಳು. ಅವಳು ಮನೆಗೆ ಬಂದ ಅತಿಥಿಗಳ ಜೊತೆ ಮುದ್ದು ಮಲಯಾಳಂ ಭಾಷೆಯಲ್ಲಿ ಮಾತಾಡುತ್ತಾಳೆ. ಚೆಂಡು ಹಿಡಿದು ಆಟವಾಡೋಣ ಬನ್ನಿ ಎಂದು ಕಣ್ಣು ಮಿಟುಕಿಸುತ್ತಾಳೆ. ಮನೆಯ ಸಮೀಪವೇ ಬರುವ ಕೆಂದಳಿಲು ಇವಳಿಗೆ ಗೊತ್ತು. ಮನೆಯ ಮುಂದಿನ ಬಳ್ಳಿ ಹೂವಿನ ದಳಗಳ ಹಿಡಿದು ಮುಕ್ಕಲು ಕೆಂದಳಿಲು ಬಂದಾಗ ಇವಳೇ ಮೊದಲು ಕೂಗಿ ನಮ್ಮನ್ನು ಕರೆದಿದ್ದು.



ಸುಧಾ ತನ್ನ ಗಂಡನನ್ನು ಇದೇ ತಟ್ಟೇಕ್ಕಾಡ್‌ನಲ್ಲಿ ಕಳಕೊಂಡವರು. ಅರಣ್ಯ ಇಲಾಖೆಯಲ್ಲಿ ಕೆಲಸಗಾರರಾಗಿದ್ದ ಅವರ ಸಾವು ಹೇಗಾಯಿತು? ಎಂಬ ವಿಷಯವನ್ನು ಎಷ್ಟು ಕೆದಕಿದರೂ ಯಾರೊಬ್ಬರೂ ಬಾಯಿ ಬಿಡಲಿಲ್ಲ. ಹೆಚ್ಚು ಒತ್ತಾಯ ಮಾಡಿ ಕೇಳುವುದು ಸೌಜನ್ಯವಲ್ಲವೆಂದು ನಾನು ಸುಮ್ಮನಾದೆ. ಗಂಡ ತೀರಿಕೊಂಡ ನಂತರ ಸುಧಾ ಇಲ್ಲಿಗೆ ಬರುವ ಅತಿಥಿಗಳಿಗೆ ಪಕ್ಷಿ ತೋರುಗರಾಗಿ ಕೆಲಸ ಮಾಡುತ್ತಿದ್ದಾರೆ. ಇಪ್ಪತ್ತೈದು ವರ್ಷಗಳಿಂದ ಕಾಡು- ಮೇಡು ಅಲೆದು ಸುಸ್ತಾದ ಇವರೀಗ ತಮ್ಮ ಜವಾಬ್ದಾರಿಯನ್ನು ಗಿರೀಶನಿಗೆ ವಹಿಸಿದ್ದಾರೆ. ಈಗ ಗಿರೀಶನೂ ಅಮ್ಮನಂತೆ ಅನೇಕ ಪಕ್ಷಿಗಳ ಕೂಗನ್ನು ಬಾಯಲ್ಲೇ ನುಡಿಸಬಲ್ಲ. ಹಕ್ಕಿಗಳ ದನಿ ಗುರುತಿಸಿ ಪರಿಚಯ ಹೇಳಬಲ್ಲ. ಬಂದ ಪಕ್ಷಿ ಪ್ರಿಯರಿಗೆ ನೋವಾಗದಂತೆ ನಡೆಸಿಕೊಳ್ಳಬಲ್ಲ. ಕಾಡನ್ನು ಸುತ್ತಿಸಿ ಅನೇಕ ಹಕ್ಕಿಗಳ ಪಟ ಹಿಡಿಸಬಲ್ಲ.

ಬರುವ ಅತಿಥಿಗಳಿಗೆ ಊಟ ಬೇಯಿಸುವ ಗಿರೀಶ್ ಹೆಂಡತಿ, ಅತ್ತೆಯಿಂದ ಅನೇಕ ಬಗೆಯ ಉಪ್ಪಿನಕಾಯಿ ಹಾಕುವ ವಿದ್ಯೆ ಕರಗತ ಮಾಡಿಕೊಂಡವಳು. 'ಉಪ್ಪಿನಕಾಯಿ ಮಾರಾಟದ ಲಾಭವೆಲ್ಲಾ ನನ್ನದೇನೆ. ನನ್ನ ಸ್ವಂತದ ದುಡಿಮೆಯೂ ಇರಬೇಕಲ್ಲವೇ?' ಎಂದು ನಕ್ಕಳು. ನಸುಕು ಹರಿಯುವ ಮುನ್ನವೇ ಎದ್ದು ಗಿರೀಶನ ಜೊತೆ ಕಾಡು ಸುತ್ತಲು ಹೋಗುತ್ತಿದ್ದ ನಾವು ತಿಂಡಿ ಸಮಯಕ್ಕೆ ಬರುತ್ತಿದ್ದೆವು. ಮಧ್ಯಾಹ್ನದ ಊಟ ಮುಗಿಸಿ ಮತ್ತೆ ಕಾಡಿಗೆ ಮರಳುತ್ತಿದ್ದೆವು. ರಾತ್ರಿ ಊಟ ಮುಗಿಸಿದ ಮೇಲೆ ಗಿರೀಶ್, ಪೆರಿಯಾರ್ ನದಿಯ ಸುತ್ತ